# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 267 (1925) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-03-2021 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ತಾಲ್ಲೂಕಿನ ಹೊರ ವಲಯದಲ್ಲಿ ಕಸ ವಿಲೇವಾರಿ ಘಟಕವನ್ನು ಯಾವಾಗ ಸ್ಥಾಪಿಸಲಾಯಿತು; ಭೂಭರ್ತಿ ನಿವೇಶನ (Land fill Site) ಇದಕ್ಕೆ ತಗುಲಿದ ವೆಚ್ಚವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಬೀದರ್ ನಗರಸಭೆಯ ಘನ ತ್ಯಾಜ್ಯ ವಸ್ತು ನಿರ್ವಹಣೆಗಾಗಿ ಬೀದರ ತಾಲ್ಲೂಕಿನ ಹೊರ ವಲಯದಲ್ಲಿ ಸುಲ್ತಾನಪೂರ. ಜೆ, ಗ್ರಾಮದ ಸರ್ವೆ ನಂ. 39/ಎ & 39/ಸಿ ರಲ್ಲಿನ 24 ಎಕರೆ 18 ಗುಂಟೆ ಜಮೀನಿನಲ್ಲಿ ಕಸ ವಿಲೇವಾರಿ ಘಟಕವನ್ನು 2004-05ನೇ ಸಾಲಿನಿಂದ ಇಲ್ಲಿಯವರಗೆ ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗಿರುತ್ತದೆ. ಇದಕ್ಕೆ ತಗುಲಿದ ವೆಚ್ಚದ ವಿವರಗಳು ಈ ಕೆಳಕಂಡಂತಿರುತ್ತದೆ. |

(ರೂ. ಲಕ್ಷಗಳು)

| | | |
|---|---|---|
| 1. | ತ್ಯಾಜ್ಯ ವಿಲೇವಾರಿ ಜಾಗದ ಖರೀದಿ | 15.25 |
| 2 | ಜಾಗದ ಸುತ್ತಲೂ ಕಾಂಪೌಂಡ್ ನಿರ್ಮಿಸಲು | 78.00 |
| 3 | ವಿಂಡ್ರೋ ಪ್ಲಾಟ್‌ಫಾರಂ ಅಭಿವೃದ್ಧಿ | 50.00 |
| 4 | ವರ್ಮಿ ಕಾಂಪೋಸ್ಟ್ ಘಟಕ ನಿರ್ಮಾಣ | 50.00 |
| 5 | ತ್ಯಾಜ್ಯ ವಿಂಗಡಣೆ ಯಂತ್ರ | 60.00 |
| 6 | ಸ್ಯಾನಿಟರಿ ನೆಲಭರ್ತಿ ಸೌಲಭ್ಯ | 20.00 |
| | **ಒಟ್ಟು ವೆಚ್ಚ ಮಾಡಿರುವ ಮೊತ್ತ** | **273.25** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ | ಹಾಗಿದ್ದಲ್ಲಿ ಈ ಘಟಕದ ಯಂತ್ರೋಪಕರಣಗಳು ಎಲ್ಲಿ ಯಾವಾಗ ಯಾವ ಏಜೆನ್ಸಿ ಮೂಲಕ ಯಾವ ಕಂಪನಿಯದಾಗಿದೆ; ಹಾಗೂ ಈ ಯಂತ್ರವನ್ನು ಟೆಂಡರ್ ಮೂಲಕ ಖರೀದಿಸಲಾಗಿದೆಯೇ; ಟೆಂಡರ್ ಕರೆದಿದ್ದಲ್ಲಿ, ಟೆಂಡರ್ ಪ್ರಕ್ರಿಯೆಯ ಪ್ರತಿಯೊಂದಿಗೆ ಸ್ಪಷ್ಟ ವಿವರ ನೀಡುವುದು; | ಸದರಿ ಘಟಕದಲ್ಲಿ ಟೆಂಡರ್ ಪ್ರಕ್ರಿಯೆ ಹಾಗೂ ನಿರ್ಮಿತಿ ಕೇಂದ್ರದ ಮೂಲಕ ಸ್ಥಾಪಿಸಿರುವ ಯಂತ್ರೋಪಕರಣಗಳು ಹಾಗೂ ಸೌಲಭ್ಯಗಳ ವಿವರಗಳನ್ನು **ಅನುಬಂಧ**-1 ರಲ್ಲಿ ಲಗತ್ತಿಸಿದೆ. |
| ಇ | ಈ ಘಟಕದಿಂದ ಸುತ್ತಮುತ್ತಲಿನಲ್ಲಿ ಬರುವ ಗ್ರಾಮದ ಗ್ರಾಮಸ್ಥರಿಗೆ ಹಾಗೂ ಸಾರ್ವಜನಿಕರಿಗೆ ದುರ್ವಾಸನೆಯಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ನಿಯಂತ್ರಿಸಲು ಸರ್ಕಾರ | ಬೀದರ್ ನಗರಸಭೆಯ ತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಪೂರ್ಣ ಪ್ರಮಾಣದಲ್ಲಿ ತ್ಯಾಜ್ಯ ಸಂಸ್ಕರಣೆಯಾಗದೇ ಇರುವುದರಿಂದ ಹೊರಬರುವ ವಾಸನೆ ಹಾಗೂ ತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯದಲ್ಲಿರುವ ಅರ್.ಡಿ.ಎಫ್ (ದಹಿಸಬಹುದಾದಂತಹ ತ್ಯಾಜ್ಯ) ಹಾಗೂ ಮಿಶ್ರ ಕಸದ ಕೊಳೆಯುವಿಕೆಯಿಂದ ಉತ್ಪತ್ತಿಯಾಗುವ ಮಿಥೇನ್ ಅನಿಲದಿಂದಾಗಿ, ಬೆಂಕಿ ಹತ್ತಿಕೊಳ್ಳುವ ಸಂಭಾವನೀಯ ಘಟನೆಗಳಿಂದಾಗಿ ಹೊರಬರುವ ಹೊಗೆಯಿಂದ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಹಾಗೂ ಸಾರ್ವಜನಿಕರಿಗೆ |

| | | |
|---|---|---|
| | ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಸಮಸ್ಯೆಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>• ಕಸ ವಿಲೇವಾರಿ ಘಟಕದಲ್ಲಿ 8 ಅಡಿ ಸುತ್ತುಗೋಡೆ ಮತ್ತು 3 ಅಡಿ ಫೆನ್ಸ್ ನಿರ್ಮಾಣ ಮಾಡಲಾಗಿದೆ.<br>• ಘಟಕ ಸುತ್ತಲೂ ಸುಮಾರು 500 ಗಿಡಗಳನ್ನು ನೆಡಲಾಗಿದೆ.<br>• ಪಾರಂಪರಿಕ ತ್ಯಾಜ್ಯ ನಿರ್ವಹಣೆಗಾಗಿ EOI ನ್ನು ಆಹ್ವಾನಿಸಿ, ನಿಯಮಾನುಸಾರ ನಿರ್ವಹಿಸಲು ಕ್ರಮ ವಹಿಸಿದೆ.<br>• ಹಾಲಿ ಲಭ್ಯವಿರುವ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಶೇ.35 ರಷ್ಟು ಹಸಿ ತ್ಯಾಜ್ಯವನ್ನು ಕಾಂಪೋಸ್ಟಿಂಗ್ ವಿಧಾನದ ಮೂಲಕ ಸಂಸ್ಕರಣೆ ಮಾಡಲು ಕ್ರಮ ವಹಿಸಿದೆ. ಉಳಿಕೆ ತ್ಯಾಜ್ಯದ ವಾಸನೆ, ಗಾತ್ರ ತಗ್ಗಿಸಲು ಬಯೋ ಕಲ್ಚರ್ ದ್ರಾವಣವನ್ನು ಸಿಂಪಡಿಸಲಾಗುತ್ತಿದೆ.<br>• ನಿಸತ್ವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸ್ಯಾನಿಟರಿ ಲ್ಯಾಂಡ್‌ಫಿಲ್ ಅನ್ನು ಅಭಿವೃದ್ಧಿ ಪಡಿಸಲಾಗಿದೆ.<br>• ಬೀದರ್ ನಗರ ಸಭೆಯಲ್ಲಿ ಶೇ. 74 ರಷ್ಟು ತ್ಯಾಜ್ಯ ವಿಂಗಡಣೆಯಾಗುತ್ತಿದ್ದು, ಪೂರ್ಣ ಪ್ರಮಾಣದ ತ್ಯಾಜ್ಯ ವಿಂಗಡಣೆಗೆ ಕ್ರಮ ವಹಿಸಲಾಗುತ್ತಿದೆ.<br>• ಇದಲ್ಲದೇ ನಗರ ಸಭೆಯ 2 ವಾರ್ಡ್‌ಗಳಲ್ಲಿ ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣೆಯನ್ನು ಪ್ರಾಯೋಗಾತ್ಮಿಕವಾಗಿ ಪ್ರಾರಂಭಿಸಲಾಗಿರುತ್ತದೆ.<br>• ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಬೀದರ್ ನಗರಸಭೆ ವ್ಯಾಪ್ತಿಯಲ್ಲಿ ಪ್ರತಿದಿನ ಉತ್ಪಾದನೆಯಾಗುವ 91 ಟನ್ ಘನತ್ಯಾಜ್ಯವನ್ನು ಪೂರ್ಣ ಪ್ರಮಾಣದಲ್ಲಿ ಸಂಸ್ಕರಣೆ ಮಾಡಲು ಅಗತ್ಯವಿರುವ ಹೆಚ್ಚುವರಿ ಮೂಲಭೂತ ಸೌಲಭ್ಯವನ್ನು ಪ್ರಸ್ತಾಪಿಸಿ ರೂ. 976.76 ಲಕ್ಷಗಳ ಬಂಡವಾಳ ಮೊತ್ತದ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿ, ಸರ್ಕಾರದ ಅನುಮೋದನೆ ಪಡೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| ಈ | ಈ ಘಟಕದಿಂದ ಇಲ್ಲಿಯವರೆಗೆ ಎಷ್ಟು ಪ್ರಮಾಣದಲ್ಲಿ 'ಗೊಬ್ಬರ' ತಯಾರಿಸಲಾಗಿದೆ ಹಾಗೂ ಮಾರಾಟದಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು? (ವರ್ಷವಾರು ಮಾಹಿತಿ ನೀಡುವುದು) | ಘಟಕವು 2018 ರಿಂದ ಕಾರ್ಯಾರಂಭ ಮಾಡಿದ್ದಾಗ್ಯೂ, 2019-20 ರಿಂದ ಗೊಬ್ಬರ ಉತ್ಪಾದನೆಯನ್ನು ಪ್ರಾರಂಭಿಸಿದ್ದು, ಪ್ರಾರಂಭದಲ್ಲಿ ಉತ್ಪಾದಿಸಲಾದ 15 ಟನ್ ಗೊಬ್ಬರವನ್ನು ನಗರಸಭೆ ಉದ್ಯಾನವನಗಳಲ್ಲಿ ಉಪಯೋಗಿಸಲಾಗಿರುತ್ತದೆ. ಮುಂದುವರೆದು 2020-21ನೇ ಸಾಲಿನಲ್ಲಿ ಅಂದಾಜು 70 ಟನ್ ಗೊಬ್ಬರವನ್ನು ಉತ್ಪಾದಿಸಿದ್ದು, ಶ್ರೀ ಸಾಯಿ ಬಯೋ ಅಗ್ರ್ಯಾನಿಕ್ ಹೈದರಾಬಾದ್ ರವರಿಗೆ ರೂ. 42,500/- ಕ್ಕೆ ಮಾರಾಟ ಮಾಡಲಾಗಿರುತ್ತದೆ. |

ಸಂಖ್ಯೆ: ನಅಇ 60 ಸಿಎಸ್ಎಸ್ 2021

[ಎನ್. ನಾಗರಾಜು (ಎಂ.ಟಿ.ಬಿ.)]
ಪೌರಾಡಳಿತ ಹಾಗೂ ಸಕ್ಕರೆ ಸಚಿವರು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ-1925 ಗೆ ಅನುಬಂಧ-1

| ಕ್ರ. ಸಂ | ಅನುದಾನದ ವಿವರ | ಖರೀದಿಸಿರುವ ವರ್ಷ | ಯಂತ್ರದ ಹೆಸರು | ಟೆಂಡರ್ ಕರೆದಿರುವ ದಿನಾಂಕ | ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದಿರುವ ಏಜೆನ್ಸಿಗಳ ಹೆಸರು. | ಕಾರ್ಯದೇಶ ನೀಡಿರುವ ದಿನಾಂಕ | ಅಂತಿಮಗೊಂಡ ಏಜನ್ಸಿಯ ಹೆಸರು | ಖರೀದಿಸಿದ ಮೊತ್ತ |
|---|---|---|---|---|---|---|---|---|
| 1 | 13ನೇ ಹಣಕಾಸು ಯೋಜನೆ (ಜಿಬಿಜಿ) | 2017-18 | 1 ಟನ್ ಪ್ಲಾಸ್ಟಿಕ್ ಬೇಲಿಂಗ್ ಯಂತ್ರ | 10-02-2017 | ರೇ ಇಂಜಿನಿಯ ರಿಂಗ್ ವರ್ಕ್ಸ್ ಬೆಳಗಾವಿ<br>ಸಾಧನ ಎನ್ವಿರೋ ಇಂಜಿನಿಯರ್ | 14-07-2017 | ರೇ ಇಂಜಿನಿಯ ರಿಂಗ್ ವರ್ಕ್ಸ್ ಬೆಳಗಾವಿ | 4.25 ಲಕ್ಷ |
| 2 | 13ನೇ ಹಣಕಾಸು ಯೋಜನೆ (ಜಿಬಿಜಿ) 2014-15 | 2017-18 | 50 ಟನ್ ವೇಯಿಂಗ್ ಬ್ರಿಡ್ಜ್ | 08-01-2018 | ಮೇಟ್‌ವೇ ಇಂಡಿಯಾ<br>ರೇ ಇಂಜಿನಿಯ ರಿಂಗ್ ವರ್ಕ್ಸ್ ಬೆಳಗಾವಿ | 22-02-2018 | ಮೇಟ್‌ವೇ ಇಂಡಿಯಾ | 13.65 ಲಕ್ಷ |
| 3 | 2015-16 ನೇ ಸಾಲಿನ ಎಸ್.ಎಫ್.ಸಿ (ಮುಕ್ತನಿಧಿ) | 2016-17 | ಪ್ರತಿ ದಿನ 40 ಟನ್ ಸ್ಕ್ರೀನಿಂಗ್ ಯಂತ್ರ ಜೊತೆಗೆ ಕನ್ವೇಯರ್ ಬೇಲ್ಟ್ | ನಿರ್ಮಿತಿ ಕೇಂದ್ರಕ್ಕೆ ದಿನಾಂಕ: 10-11-2016 ರಂದು ನೇರವಾಗಿ ಕಾರ್ಯಾದೇಶ ನೀಡಲಾಗಿರುತ್ತದೆ. | | | ನಿರ್ಮಿತಿ ಕೇಂದ್ರ ಬೀದರ | 40.00 ಲಕ್ಷ. |
| 4 | ಎಸ್.ಎಫ್.ಸಿ (ಮುಕ್ತನಿಧಿ) 2013-14 | 2013-14 | ಸೆಗ್ರಿಗೇಷನ್ ಯಂತ್ರ | ನಿರ್ಮಿತಿ ಕೇಂದ್ರಕ್ಕೆ ದಿನಾಂಕ:22-03-2014 ರಂದು ನೇರವಾಗಿ ಕಾರ್ಯಾದೇಶ ನೀಡಲಾಗಿರುತ್ತದೆ. | | | ನಿರ್ಮಿತಿ ಕೇಂದ್ರ ಬೀದರ | 10.00 ಲಕ್ಷ |
| 5 | ಎಸ್.ಎಫ್.ಸಿ (ಮುಕ್ತನಿಧಿ) 2014-15 | 2014-15 | ವಿಂಡ್ರೋ ಪ್ಲಾಟ್ ಫಾರಂ | | | | ನಿರ್ಮಿತಿ ಕೇಂದ್ರ ಬೀದರ | 40.00 ಲಕ್ಷ |
| 6 | ಎಸ್.ಎಫ್.ಸಿ (ಮುಕ್ತನಿಧಿ) 2014-15 | 2014-15 | ಸಿಸಿ ಚರಂಡಿ ಲಿಚೇಟ್ ಟ್ಯಾಂಕ್‌ನೊಂದಿಗೆ ನಿರ್ಮಾಣ | | | | ನಿರ್ಮಿತಿ ಕೇಂದ್ರ ಬೀದರ | 36.00 ಲಕ್ಷ |
| 7 | 13ನೇ ಹಣಕಾಸು (ಜ.ಬಿ.ಜಿ) 2012-13 | 2012-13 | ವರ್ಮಿ ಕಾಂಪೋಸ್ಟಿಂಗ್ | | | | ನಿರ್ಮಿತಿ ಕೇಂದ್ರ ಬೀದರ | 18.00 ಲಕ್ಷ |
| 8 | ಎಸ್.ಎಫ್.ಸಿ (ಮುಕ್ತನಿಧಿ) 2012-13 | 2012-13 | ಸ್ಯಾನೀಟರಿ ಪಿಟ್‌ನೊಂದಿಗೆ ಲೈನರ ಲೀಚೆಟ್ ಟ್ಯಾಂಕನೊಂದಿಗೆ ನಿರ್ಮಾಣ ಮಾಡಲಾಗಿದೆ | | | | ನಿರ್ಮಿತಿ ಕೇಂದ್ರ ಬೀದರ | 50.00 ಲಕ್ಷ |